ಲೇಖನ ಬರೆಯಲು ಲ್ಯಾಪ್‌ಟಾಪ್, ಫೇಸ್‌ಬುಕ್–ವಾಟ್ಸ್‌ಆ್ಯಪ್‌ಗಳಿಗೆ ಹಾಗೂ ಮಾತನಾಡಲು ಪ್ರತ್ಯೇಕ ಮೊಬೈಲ್ ಇಟ್ಟುಕೊಂಡ ನನಗೆ ಅವುಗಳನ್ನು ಒಂದರ ಅನಂತರ ಮತ್ತೊಂದನ್ನು ಚಾರ್ಜಿಗೆ ಹಾಕುವ ಪರದಾಟ ತಪ್ಪಿದ್ದಲ್ಲ. ದಿನಬೆಳಗಾದರೆ ಬಂದು ಬೀಳುವ ರಾಶಿರಾಶಿ ವಾಟ್ಸ್‌ಆ್ಯಪ್ ಕಸವನ್ನು ಬೆರಳಿನಿಂದ ಗುಡಿಸಿ ಸಾಕಾಗಿ, ನನ್ನ ಮೊಬೈಲ್ ಹ್ಯಾಂಗ್ ಆಗತೊಡಗಿದಾಗ ಅದಕ್ಕೆಂದೇ ಹಳೆಯ ಮೊಬೈಲ್ ಮೀಸಲಿಟ್ಟು, ನಿತ್ಯದ ಬಳಕೆಗಾಗಿ ಹೊಸ ಮೊಬೈಲ್ ಖರೀದಿಸಿದ್ದೆ. ಏನೇ ಅನ್ನಿ, ತಾಂತ್ರಿಕತೆ ಬೆಳೆದಂತೆಲ್ಲ ಅನುಕೂಲಗಳು ಹೆಚ್ಚಾದರೂ ಮೇಲ್ನೋಟಕ್ಕೆ ಅರಿವಿಗೆ ಬಾರದ ಸಮಸ್ಯೆಯ ಸುಳಿಗಳು ಅಡಗಿಕೊಂಡಿರುತ್ತವೆ.

ಯಜಮಾನರ, ಹಿರಿಯ ಮಗ ಹಾಗು ಕಿರಿಯವನ ಮೊಬೈಲಿನಿಂದ ಹಿಡಿದು ಟ್ಯಾಬ್, ಲ್ಯಾಪ್‌ಟಾಪ್, ಫಿಟ್ ಬಿಟ್ ಕೈಗಡಿಯಾರಗಳಷ್ಟೇ ಅಲ್ಲದೆ, ಅವರ ದಾಡಿ ಮಾಡಿಕೊಳ್ಳುವ ಟ್ರಿಮ್ಮರ್‌ಗಳನ್ನೂ ಚಾರ್ಜ್ ಮಾಡಿಸುವ ಗೌಜು ಗದ್ದಲಗಳ ದೃಶ್ಯ ನಮ್ಮ ಮನೆಯಲ್ಲಿ ಪ್ರತಿನಿತ್ಯ ಬೆಳಗ್ಗೆ ಕಾಣಿಸುತ್ತದೆ. ನಮ್ಮ ಮನೆಯಲ್ಲಿ ಅನ್ನ ದಾಸೋಹಕ್ಕೂ ಮುನ್ನ ಆರಂಭವಾಗುವುದು ಚಾರ್ಜ್ ದಾಸೋಹವೆ! ಇದೆಲ್ಲ ನೋಡುವಾಗ ಚಾರ್ಜ್ ಮಾಡುತ್ತಲೇ ನಾವು ಜೀವನದ ಪಯಣ ಮುಗಿಸುತ್ತೇವೇನೊ ಎಂದು ಆಗಾಗ ಅನಿಸುತ್ತದೆ.

ನಮ್ಮ ಅಗತ್ಯಕ್ಕೂ ಮೀರಿದ ವಸ್ತುಗಳನ್ನು ಕೊಳ್ಳುವ ಮೋಹ ನಮ್ಮನ್ನು ಬಾಳಿನುದ್ದಕ್ಕೂ ಆವರಿಸಿ, ನಮಗರಿವಿಲ್ಲದಂತೆ ಆ ಬಂಧನದಲ್ಲಿ ಸಿಲುಕಿಕೊಂಡಿರುತ್ತೇವೆ. ಈ ಆಧುನಿಕ ಜೀವನ ಶೈಲಿಗೆ ಎಲೆಕ್ಟ್ರಾನಿಕ್ ಉಪಕರಣಗಳ ಮೇಲಿನ ನಮ್ಮ ಮೋಹವನ್ನು ಇದಕ್ಕೆ ತಳಕು ಹಾಕಿ ನೋಡಬಹುದು. ಕಾರ್ಡ್‌ಲೆಸ್ ಹೆಡ್‌ಫೋನು, ಬ್ಲೂಟೂತು, ಟ್ಯಾಬು, ಐಪ್ಯಾಡು, ಲ್ಯಾಪ್‌ಟಾಪ್... ಅಬ್ಬಬ್ಬ ಗ್ಯಾಡ್ಜೆಟ್‌ಗಳ ಸಂತೆ! ಒಬ್ಬೊಬ್ಬರಿಗೂ ಎಷ್ಟೆಲ್ಲಾ ವಿದ್ಯುನ್ಮಾನ ಉಪಕರಣಗಳು, ಬಾಲಂಗೋಚಿಯಾಗಿ ಬರುವ ಅವುಗಳ ಚಾರ್ಜರ್‌ಗಳು! ಜೀವನದ ಸಂಗಾತಿಗಳಂತೆಯೆ ಇವುಗಳನ್ನು ಸಹ ಸಂಭಾಳಿಸುವುದು ಎಷ್ಟು ಕಷ್ಟ ಎಂಬುದು ನಿಮ್ಮ ಅನುಭವಕ್ಕೂ ಬಂದಿರಬೇಕು! ನಮ್ಮನೆಯ ಆರು ಮೊಬೈಲುಗಳ ಚಾರ್ಜರ್‌ಗಳು ಆಗಾಗ ಅದಲು ಬದಲಾಗಿ, ಯಾರದೋ ಅಡಾಪ್ಟರಿಗೆ ಮತ್ಯಾರದ್ದೋ ವೈರು ಹೊಂದಾಣಿಕೆ ಮಾಡಿಕೊಂಡು ಹೊಸ ಅವತಾರದಲ್ಲಿ ಕಾಣಿಸಿಕೊಳ್ಳುತ್ತವೆ. ಈ ಚಮತ್ಕಾರಗಳಲ್ಲಿ ನನ್ನ ಕೊಡುಗೆ ಹೆಚ್ಚಾಗಿದ್ದು, ಮನೆಯ ಸದಸ್ಯರೆಲ್ಲಾ ತಮ್ಮ ಚಾರ್ಜರ್‌ಗಳನ್ನು ನನ್ನ ಕಣ್ಣಿಗೆ ಬೀಳದಂತೆ ಎಚ್ಚರಿಕೆ ವಹಿಸುತ್ತಾರೆ. ಮಗನಂತೂ ಗುರುತಿಗಾಗಿ ಅವನ ಬಿಳಿ ಬಣ್ಣದ ಅಡಾಪ್ಟರಿನ ಮೇಲೆ ತನ್ನ ಹೆಸರು ಅಚ್ಚು ಹಾಕಿಸುವುದೊಂದೇ ಬಾಕಿ ಇದೆ! ಈ ಚಾರ್ಜಿಂಗ್ ಗದ್ದಲಕ್ಕೆ ನನಗಂತೂ ತಲೆಕೆಟ್ಟು ವೈಯರ್‌ಲೆಸ್ ಹೆಡ್‌ಫೋನ್, ಕೀ ಬೋರ್ಡ್ ಇದ್ದಂತೆ ಚಾರ್ಜ್‌ಲೆಸ್ ಮೊಬೈಲ್ ಸಹ ಬರಬಹುದೇ ಎಂದು ಎದುರು ನೋಡುತ್ತಿದ್ದೇನೆ.

ನನ್ನ ಹಳೆಯ ಮೊಬೈಲುಗಳನ್ನು ವಿಲೇವಾರಿ ಮಾಡಿದ್ದರೂ ಸಹ ಅವುಗಳ ಚಾರ್ಜರ್ ವೈರು, ಅಡಾಪ್ಟರ್ ಸಮೇತ (ತಾಯಿಯನ್ನು ಕರುಳು ಬಳ್ಳಿಯ ಜೊತೆಯಲ್ಲೇ) ಮುಂದೆಂದಾದರೂ ಉಪಯೋಗಕ್ಕೆ ಬರಬಹುದೆಂದು ಕಾಪಿಟ್ಟುಕೊಳ್ಳುವುದು ನನ್ನ ಚಾರ್ಜರ್ ಮೋಹಿ ಚಟಕ್ಕೆ ಮತ್ತೊಂದು ಸಾಕ್ಷಿ! ಹಾಗಾಗಿ, ನನ್ನ ಮೇಜಿನ ಡ್ರಾಯರ್ ತೆರೆದರೆ ಸಾಕು, ಬಿದಿರಿನ ಬುಟ್ಟಿಯಲ್ಲಿ ಈ ವೈಯರುಗಳೆಲ್ಲ ಶೇಷಶಯನದ ಭಂಗಿಯಲ್ಲಿ ಒಂದಕ್ಕೊಂದು ಬಿಚ್ಚಲಾಗದಂತೆ ಸುತ್ತಿಕೊಂಡು ನೋಡಿದವರನ್ನು ಬೆಚ್ಚಿ ಬೀಳಿಸುತ್ತವೆ!

ನಿಮಗೆ ನೆನಪಿರಬಹುದು, ಮೊಬೈಲ್ ಲೋಕದ ಪೂರ್ವಸೂರಿಯಾಗಿದ್ದ ನೋಕಿಯ 3310 ಮೊಬೈಲ್ ಹ್ಯಾಂಡ್‌ಸೆಟ್ ಇಟ್ಟಿಗೆಯಂತೆ ಗಟ್ಟಿಮುಟ್ಟಾಗಿತ್ತು. ಆ ಫೀಚರ್ ಫೋನಿನಲ್ಲಿ ಈಗಿನಂತೆ ಬೆರಳಲ್ಲಿ ಮಾತಾಡಿಕೊಂಡು, ಮೊಬೈಲ್ ಸ್ಕ್ರೀನಿನಲ್ಲೇ ಸ್ನೇಹಿತರ ಗುಂಪು ಕಟ್ಟಿ ಹರಟುತ್ತ,